# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **262** |
| 2 | ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 15.02.2023 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ನಿಯಮಗಳನ್ವಯ 11ಇ ಸ್ಕೆಚ್‌ಗಳನ್ನು ನೀಡಲು ಇರುವ ಕಾಲಮಿತಿ ಎಷ್ಟು; | ಸರ್ಕಾರದ ಅಧಿಸೂಚನೆ ಸಂ.ಸಿಆಸುಇ.2.ಎಸ್.ಎಸ್.ಎಂ-2020 ದಿನಾಂಕ:23-11-2020 ರನ್ವಯ 11ಇ ಸ್ಕೆಚ್‌ಗಾಗಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ, ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆಯಾದ 45 ದಿನಗಳಲ್ಲಿ ಇತ್ಯರ್ಥಪಡಿಸಲು ಕಾಲಮಿತಿ ನಿಗದಿಪಡಿಸಿರುತ್ತದೆ |
| ಆ) | ಕಳೆದ ಒಂದು ವರ್ಷದಿಂದ 11ಇ ಸ್ಕೆಚ್‌ಗಳನ್ನು ಪಡೆಯಲು ಮೋಜಣಿ ತಂತ್ರಾಂಶದಲ್ಲಿ ಕೋರಿಕೆಗಳನ್ನು ಸಲ್ಲಿಸಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಮೋಜಣಿ ತಂತ್ರಾಂಶದಲ್ಲಿ 11ಇ ಸ್ಕೆಚ್ ಕೋರಿ 307192 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಹಿಂದಿನ ಬಾಕಿ ಅರ್ಜಿಗಳು ಸೇರಿದಂತೆ ಒಟ್ಟು 532971 ಅರ್ಜಿಗಳಲ್ಲಿ 346637 ಅರ್ಜಿಗಳಿಗೆ 11ಇ ಸ್ಕೆಚ್ ಒದಗಿಸಲಾಗಿದೆ. ಮಾಹೆ ಜನವರಿ-2023 ರ ಅಂತ್ಯಕ್ಕೆ ಒಟ್ಟು 186334 ಅರ್ಜಿಗಳು ಬಾಕಿಯಿದ್ದು, ಇವುಗಳಲ್ಲಿ 78344 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು 10799 ಅರ್ಜಿಗಳು ಅಳತೆಗಾಗಿ ಭೂಮಾಪನ ಶಾಖೆಯಲ್ಲಿ ಬಾಕಿಯಿರುತ್ತವೆ. ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ ನೀಡಿದೆ.** |
| ಇ) | ಕಳೆದ ಒಂದು ವರ್ಷದ ಅವಧಿಯಲ್ಲಿ ಮೋಜಣಿ ತಂತ್ರಾಂಶದ ಮೂಲಕ ಸ್ವೀಕೃತಗೊಂಡಿರುವ ಕೋರಿಕೆಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ 11ಇ ಸ್ಕೆಚ್‌ಗಳನ್ನು ಒದಗಿಸಲಾಗಿದೆ; ಬಾಕಿಯಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | |
| ಈ) | ಬಾಕಿಯಿರುವ ಪ್ರಕರಣಗಳಲ್ಲಿ 11ಇ ಸ್ಕೆಚ್‌ಗಳನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; | **ಬಾಕಿಯಿರುವ 11ಇ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ**<br>1) ಭೂಮಾಪನ ಇಲಾಖೆಯಲ್ಲಿ ಮೋಜಣಿ ತಂತ್ರಾಂಶದ ಮುಖಾಂತರ ಅರ್ಜಿಗಳ ಸ್ವೀಕೃತಿ, ಅರ್ಜಿಗಳ ಹಂಚಿಕೆ, ಅಳತೆ ಮಾಡಿ ಅಪ್‌ಲೋಡ್ ಮಾಡುವುದು, ಕಡತಗಳ ಪರಿಶೀಲನೆ ಮೊದಲಾದ ಎಲ್ಲಾ ಅಳತೆ ಪ್ರಕ್ರಿಯೆಗಳನ್ನು ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಆನ್‌ಲೈನ್ ಮೂಲಕ ನಿರ್ವಹಿಸಲಾಗುತ್ತಿದೆ.<br>2) ನಿಯಮಿತವಾಗಿ ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>3) ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.<br>4) ಕಾಲಕಾಲಕ್ಕೆ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>5) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ |

| | | |
|---|---|---|
| | | ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>6) 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ 01-02-2021 ಮತ್ತು 02-02-2021 ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತರಬೇತಿ ನಂತರ ಉತ್ತೀರ್ಣವಾದ 841 ಜನರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಿದ್ದು, ನಿಯೋಜಿತ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲಾಖಾ ತರಬೇತಿ ಪೂರ್ಣಗೊಳಿಸಿರುವ 438 ಜನ ಪರವಾನಗಿ ಭೂಮಾಪಕರಿಗೆ ವಿವಿಧ ತಾಲ್ಲೂಕುಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯೋಜನೆ ಮಾಡಲಾಗಿದೆ. ಪ್ರಸ್ತುತ 508 ಪರವಾನಗಿ ಭೂಮಾಪಕರು ತರಬೇತಿ ಪಡೆಯುತ್ತಿದ್ದು, ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುತ್ತಿದೆ.<br>7) ಅಗತ್ಯತೆಗನುಗುಣವಾಗಿ ಹೊಸದಾಗಿ 3000 ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳಲು ದಿನಾಂಕ 28-12-2021 ರಂದು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರವೇಶ ಪರೀಕ್ಷೆ ನಡೆಸಿ ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುತ್ತಿದೆ.<br>8) ಭೂಕಂದಾಯ ನಿಯಮಗಳಿಗೆ ಅಗತ್ಯ ತಿದ್ದುಪಡಿ ತಂದು ಸರ್ಕಾರಿ ಭೂಮಾಪಕರು ಹಾಗೂ ಪರವಾನಗಿ ಭೂಮಾಪಕರುಗಳಿಗೆ ಅಳತೆ ಅರ್ಜಿಗಳನ್ನು ಸಮರ್ಪಕ ರೀತಿಯಲ್ಲಿ ಹಂಚಿಕೆ ಮಾಡಲಾಗುತ್ತಿದ್ದು, ಇದರಿಂದ ಭೂಮಾಪಕರ ಕಾರ್ಯ ಒತ್ತಡ ಕಡಿಮೆಯಾಗಿ, ಅಳತೆ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲಾಗುತ್ತಿದೆ. |
| ಉ) | ಸರ್ಕಾರವು 11ಇ ಸ್ಕೆಚ್ ವಿತರಣೆಯಲ್ಲಿ ತಡ ಉಂಟಾಗುತ್ತಿರುವುದನ್ನು ಗಮನಿಸಿ, ಪ್ರತ್ಯೇಕ ತಂತ್ರಾಂಶ ವನ್ನು ಸಹ ರೂಪಿಸಿದ್ದರೂ 11ಇ ಸ್ಕೆಚ್ ವಿತರಣೆಯಲ್ಲಿ ವಿಳಂಬವಾಗದಿರಲು ಯಾವ ರೀತಿ ಕ್ರಮಗಳನ್ನು ಕೈಗೊಳ್ಳಲಾಗಿದೆ; ಹಾಗೂ ಇದು ಕಾರ್ಯಗತಗೊಂಡಿದೆಯೇ? | 11ಇ ಸ್ಕೆಚ್ ವಿತರಣೆಯಲ್ಲಿ ವ್ಯತ್ಯಯವಾಗುತ್ತಿದ್ದನ್ನು ಗಮನಿಸಿ ಸಾರ್ವಜನಿಕರು ತಮ್ಮ ಖಾಸಗಿ ಭೂಮಿಯನ್ನು ಖುದ್ದಾಗಿ ಪೋಡಿ ಮಾಡುವ ಕುರಿತು **ಸ್ವಾವಲಂಬಿ ಯೋಜನೆಯನ್ನು** ದಿನಾಂಕ:30-04-2022 ರಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಈವರೆಗೆ 11ಇ ನಕ್ಷೆ ಕೋರಿ ಒಟ್ಟು 12,852 ಅರ್ಜಿಗಳು ಸ್ವೀಕೃತವಾಗಿದ್ದು, ಅಳತೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲಾಗಿದೆ. 9685 ಅರ್ಜಿಗಳನ್ನು ಸಾರ್ವಜನಿಕರು ಅಳತೆ ಮಾಡಿ ಅಪ್ಲೋಡ್ ಮಾಡಿದ್ದು, 3167 ಅರ್ಜಿಗಳು ಅಪ್‌ಲೋಡ್ ಮಾಡಲು ಬಾಕಿಯಿರುತ್ತವೆ. ಸಾರ್ವಜನಿಕರು ಅಪ್‌ಲೋಡ್ ಮಾಡಿರುವ ಅರ್ಜಿಗಳನ್ನು ಪರಿಶೀಲಿಸಿ, ಒಟ್ಟು 8985 ನಕಾಶೆಗಳನ್ನು ವಿತರಿಸಲಾಗಿರುತ್ತದೆ. |

**ಸಂಖ್ಯೆ: ಕಂಇ 36 ಎಸ್‌ಎಸ್‌ಸಿ 2023**

**(ಆರ್.ಅಶೋಕ)**
ಕಂದಾಯ ಸಚಿವರು

# ಅನುಬಂಧ

LCQ-262

ರಾಜ್ಯದಲ್ಲಿ ಸನ್ 2022-23 ನೇ ಸಾಲಿನಲ್ಲಿ 11ಇ ನಕ್ಷೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಜಿಲ್ಲಾವಾರು ವಿವರ

| ಜಿಲ್ಲೆ | ಪ್ರಾ ಶಿಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ |
|---|---|---|---|---|---|---|---|
| ಬೆಳಗಾವ | 10842 | 21328 | 32170 | 23554 | 8616 | 2771 | 5845 |
| ಬಾಗಲಕೋಟೆ | 1723 | 7354 | 9077 | 7363 | 1714 | 153 | 1561 |
| ಬಿಜಾಪುರ | 6688 | 11561 | 18249 | 12451 | 5798 | 1505 | 4293 |
| ಗುಲ್ಬರ್ಗ | 13117 | 13862 | 26979 | 16669 | 10310 | 4244 | 6066 |
| ಬೀದರ್ | 9491 | 8772 | 18263 | 10906 | 7357 | 3349 | 4008 |
| ರಾಯಚೂರು | 19616 | 15320 | 34936 | 22593 | 12343 | 6844 | 5499 |
| ಕೊಪ್ಪಳ | 7275 | 9407 | 16682 | 10566 | 6116 | 2735 | 3381 |
| ಗದಗ | 2554 | 5666 | 8220 | 5363 | 2857 | 479 | 2378 |
| ಧಾರವಾಡ | 2469 | 5914 | 8383 | 5281 | 3102 | 405 | 2697 |
| ಉತ್ತರಕನ್ನಡ | 4526 | 6412 | 10938 | 7147 | 3791 | 476 | 3315 |
| ಹಾವೇರಿ | 5097 | 7993 | 13090 | 7059 | 6031 | 433 | 5598 |
| ಬಳ್ಳಾರಿ | 3425 | 6812 | 10237 | 6225 | 4012 | 1084 | 2928 |
| ಚಿತ್ರದುರ್ಗ | 7141 | 11395 | 18536 | 12713 | 5823 | 2090 | 3733 |
| ದಾವಣಗೆರೆ | 7823 | 9796 | 17619 | 9367 | 8252 | 3513 | 4739 |
| ಶಿವಮೊಗ್ಗ | 6831 | 6056 | 12887 | 6938 | 5949 | 2339 | 3610 |
| ಉಡುಪಿ | 9929 | 12955 | 22884 | 15451 | 7433 | 3865 | 3568 |
| ಚಿಕ್ಕಮಗಳೂರು | 8029 | 7118 | 15147 | 9005 | 6142 | 2893 | 3249 |
| ತುಮಕೂರು | 17969 | 23720 | 41689 | 25791 | 15898 | 4111 | 11787 |
| ಕೋಲಾರ | 5405 | 6810 | 12215 | 7564 | 4651 | 1954 | 2697 |
| ಬೆಂಗಳೂರು ಜಿಲ್ಲೆ | 7101 | 4906 | 12007 | 5695 | 6312 | 4006 | 2306 |
| ಬೆಂಗಳೂರು ಗ್ರಾ. | 4108 | 9365 | 13473 | 10210 | 3263 | 1882 | 1381 |
| ಮಂಡ್ಯ | 12170 | 12756 | 24926 | 16048 | 8878 | 5344 | 3534 |
| ಹಾಸನ | 8748 | 17479 | 26227 | 19355 | 6872 | 3556 | 3316 |
| ದಕ್ಷಿಣ ಕನ್ನಡ | 10326 | 13752 | 24078 | 14785 | 9293 | 7314 | 1979 |
| ಕೊಡಗು | 275 | 2702 | 2977 | 2717 | 260 | 26 | 234 |
| ಮೈಸೂರು | 6413 | 11657 | 18070 | 13295 | 4775 | 2285 | 2490 |
| ಚಾಮರಾಜನಗರ | 1803 | 4721 | 6524 | 5237 | 1287 | 779 | 508 |
| ಚಿಕ್ಕಬಳ್ಳಾಪುರ | 3791 | 6970 | 10761 | 7195 | 3566 | 1859 | 1707 |
| ರಾಮನಗರ | 8628 | 9647 | 18275 | 10614 | 7661 | 2620 | 5041 |
| ಯಾದಗಿರ್ | 8907 | 7513 | 16420 | 10850 | 5570 | 2463 | 3107 |
| ವಿಜಯನಗರ | 3559 | 7473 | 11032 | 8630 | 2402 | 967 | 1435 |
| **ಒಟ್ಟು** | **225779** | **307192** | **532971** | **346637** | **186334** | **78344** | **107990** |